

# ಮದುವೆ ಹಿಂಸೆಯಾದಾಗ ವಿಚ್ಛೇದನವೇ ಸೂಕ್ತ

**ಮದುವೆ ಎಂಬುದು ಎರಡು ಮನಸ್ಸುಗಳ ಅರಳುವಿಕೆಗೆ ಅನುವು ಮಾಡಿಕೊಟ್ಟರೆ ಅದೊಂದು ಮಧುರ ಸಂಬಂಧವಾಗಿರುತ್ತದೆ. ಅದೇ ಮದುವೆ, ಹಿಂಸೆಯ, ಕಿರುಕುಳದ ಅಡಗುತಾಣವಾಗಿಬಿಟ್ಟರೆ ನರಕವಾಗಿ ಪರಿಣಮಿಸುತ್ತದೆ. ಸಮಾಜ, ಸಂಸ್ಕೃತಿ ಹೆಸರಿನಲ್ಲಿ ಆ ನರಕವನ್ನು ಅನುಭವಿಸುತ್ತಲೇ ಜೀವನ ಕಳೆಯುವುದಕ್ಕಿಂತ, ಅದರಿಂದ ಹೊರಬಂದು ನೆಮ್ಮದಿಯ ತಾಣಗಳನ್ನು ಹುಡುಕಿಕೊಳ್ಳುವುದೇ ಉತ್ತಮ.**

■ **ಸೌಮ್ಯಲಕ್ಷ್ಮೀ ಕುಕ್ಕಜೆ**
ನ್ಯಾಯವಾದಿ

ಪ್ರಿಯಾ ಬಹಳ ಚುರುಕಿನ, ಜೀವನಪ್ರೀತಿ ತುಂಬಿದ, ಬುದ್ಧಿವಂತ ಯುವತಿ. ಆಕೆಯ ಪೋಷಕರೂ ಸುಶಿಕ್ಷಿತರು. ಮುದ್ದಿನ ಮಗಳನ್ನು ಅದ್ದೂರಿಯಾಗಿ ಮದುವೆ ಮಾಡಿಕೊಟ್ಟಿದ್ದರು. ಆದರೆ ಮದುವೆಯಾಗಿ ಕೆಲವೇ ದಿನಗಳಲ್ಲಿ ತನ್ನ ಗಂಡ ಬಹಳ ಬೇಜವಾಬ್ದಾರಿ ಗಂಡಸು, ತಾನು ದುಡಿದದ್ದನ್ನೂ ಖರ್ಚು ಮಾಡಿ, ಮನೆಗೆ ಸರಿಯಾಗಿ ಬಾರದೆ, ತನ್ನೊಂದಿಗೆ ಬೆರೆಯದೆ, ಬಂದಾಗಲೂ ಚಿಕ್ಕಚಿಕ್ಕ ವಿಷಯಗಳಿಗೂ ಸಿಡಿಮಿಡಿಗೊಳ್ಳುವವ ಎನ್ನುವುದು ಪ್ರಿಯಾಳಿಗೆ ತಿಳಿಯಿತು. ಒಂದು ಸಂಜೆ ಇಬ್ಬರ ನಡುವೆ ಮಾತಿಗೆ ಮಾತು ನೆಳೆದು, ಪ್ರಿಯಾಳ ಕಪಾಳಕ್ಕೆ ವಿಜಯ್ ಹೊಡೆದುಬಿಡುತ್ತಾನೆ. ಮನೆಬಿಟ್ಟು ತವರಿಗೆ ಹೊರಡುವ ಪ್ರಿಯಾ, ದಾರಿಯಲ್ಲಿ ಮನೆಗೆ ಫೋನ್ ಮಾಡಿದಾಗ ಅವಳ ತಾಯಿ, 'ನೀನು ಗಂಡನ ಮನೆಬಿಟ್ಟು ಇಲ್ಲಿಗೆ ಬಂದರೆ, ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ' ಎಂದುಬಿಡುತ್ತಾಳೆ. ತಾಯಿಯನ್ನು ಕಳೆದುಕೊಳ್ಳುವುದಕ್ಕೆ ತಯಾರಿಲ್ಲದ ಪ್ರಿಯಾ, ಗಂಡನ ಮನೆಗೆ ವಾಪಸ್ಸಾಗುತ್ತಾಳೆ.

***

2019–20ರ 'ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ'ಯ ಪ್ರಕಾರ, ಭಾರತದಲ್ಲಿನ ಶೇ 25 ಮಹಿಳೆಯರು ಕೌಟುಂಬಿಕ ದೌರ್ಜನ್ಯ ಅನುಭವಿಸುತ್ತಾರೆ. ಆದರೆ ಇಂತಹ ಮದುವೆಗಳೂ ಹೇಗೋ ನಡೆದುಕೊಂಡು ಹೋಗುತ್ತಿರುತ್ತವೆ. ನಮ್ಮ ಸುಶಿಕ್ಷಿತ ಸಮಾಜದಲ್ಲೂ 'ಗಂಡನನ್ನು ಬಿಟ್ಟುಬಂದ ಮಹಿಳೆಯನ್ನು ನಾವು ಗೌರವದಿಂದ ನಡೆಸಿಕೊಳ್ಳುವುದಿಲ್ಲ. ಅಥವಾ ಹಾಗೆಂದು ಯೋಚಿಸುವ ಪೋಷಕರು, ಅಥವಾ 'ಜನರು ಆಡುವ ಮಾತಿಗೆ ಹೆಚ್ಚಿನ ಬೆಲೆಯನ್ನು ಕೊಡುವವರು, ಎಂತಹ ಹಿಂಸೆಯಿರುವ ಮದುವೆಯಾದರೂ ಅದಕ್ಕೆ ತಮ್ಮ ಮಕ್ಕಳನ್ನು ಬಲಿಯಾಗಿಸುತ್ತಾರೆ. ಎಷ್ಟೋ ಹೆಣ್ಣುಮಕ್ಕಳು ಹಿಂಸೆಯನ್ನು ಸಹಿಸಿಕೊಂಡು, ಅದರ ಬಗ್ಗೆ ಯಾರೊಂದಿಗೂ ಮಾತನಾಡದೇ



ಇದ್ದುಬಿಡುತ್ತಾರೆ.

ಅವೆಷ್ಟೋ ಮದುವೆಗಳಲ್ಲಿ ದೈಹಿಕ ಹಿಂಸೆ ಇಲ್ಲದಿರಬಹುದು. ಆದರೆ, ಯಾವೊಂದು ಪ್ರೀತಿಯೂ ಇಲ್ಲದೆ, ವಿಶ್ವಾಸವಿಲ್ಲದೆ, ಪರಸ್ಪರ ಕನಿಷ್ಠ ಗೌರವವೂ ಇಲ್ಲದೆ, ಉಸಿರುಗಟ್ಟುವಂತಹ ವಾತಾವರಣದಲ್ಲಿ ಜೀವನವನ್ನೇ ಕಳೆದುಬಿಡುತ್ತರೆ. ಅನೇಕ ಗಂಡಸರೂ ಯಾವ ಸಂತೋಷವೂ ಇಲ್ಲದ, ಮಾನಸಿಕ ಹಿಂಸೆ, ತೊಳಲಾಟಗಳಿಂದ ಕೂಡಿದ ಮದುವೆಯಲ್ಲಿ ಸಿಕ್ಕಿಹಾಕಿಕೊಂಡಿರುತ್ತಾರೆ.

ನಮ್ಮ ಸಮಾಜದಲ್ಲಿ ಮದುವೆಯನ್ನು ಬಹಳ ಪವಿತ್ರ ಸಂಬಂಧವೆಂದು ನೋಡಲಾಗುತ್ತದೆ. ಮದುವೆ ಎನ್ನುವುದಕ್ಕೆ ನಮ್ಮಲ್ಲಿ ಅದೆಷ್ಟು ಪ್ರಾಮುಖ್ಯ ಇದೆಯೆಂದರೆ, ಆ ಸಂಬಂಧ ಹೇಗೇ ಇದ್ದರೂ ಮದುವೆಯಿಂದ ಹೊರಗೆ ಬರಬಾರದೆಂದು ನಾವು ತಾಕೀತುಮಾಡಿರುತ್ತೇವೆ. ಇದೇ ನಮ್ಮ ಸಂಸ್ಕೃತಿ, ಸಂಸ್ಕಾರಗಳ ಪ್ರತೀಕವಾಗಿರುತ್ತದೆ. ಗಂಡನನ್ನು